# ಮಹಾಪುರುಷ-ಸಂಶ್ರಯ

ವಿ. ಮೀನಾ

**ಶ್ರೀರಾಮಕೃಷ್ಣರ ನೇರ ಶಿಷ್ಯರೂ ಹಾಗೂ ರಾಮಕೃಷ್ಣ ಮಹಾಸಂಘದ ನಾಲ್ಕನೆಯ ಸರ್ವಾಧ್ಯಕ್ಷರೂ ಆಗಿದ್ದ ಸ್ವಾಮಿ ವಿಜ್ಞಾನಾನಂದಜಿಯವರ ಕೃಪಾಶೀರ್ವಾದಗಳಿಗೆ ಪಾತ್ರರಾಗಿದ್ದ ಅವರ ಸೇವಕ ವೇಣಿಮಾಧವ ಎಂಬಾತನ ಕಿರು ಪರಿಚಯವನ್ನು ಮಾಡಿಕೊಟ್ಟಿರುವ ವಿ.ಮೀನಾ ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾಗಿದ್ದಾರೆ.**

“ಭಗವಂತನ ಅನುಗ್ರಹವೇ ಕಾರಣವಾಗಿರುವ ಈ ಮೂರೂ ಕಷ್ಟಸಾಧ್ಯ : ಮನುಷ್ಯಜನ್ಮ, ಮುಮುಕ್ಷುತ್ವ ಮತ್ತು ಮಹಾಪುರುಷರ ಸಂಶ್ರಯ”— ಎಂದು ಭಗವಾನ್ ಶಂಕರಾಚಾರ್ಯರು ತಮ್ಮ ವಿವೇಕಚೂಡಾಮಣಿಯ ಮೂರನೆಯ ಶ್ಲೋಕದಲ್ಲಿ ಹೇಳುತ್ತಾರೆ. ಇಂತಹ ಮಹಾತ್ಮರ ಸ್ವರೂಪವೇನು? ಅದನ್ನೂ ಭಗವತ್ಪಾದರೇ ವಿವೇಕಚೂಡಾಮಣಿಯ ಇನ್ನಿತರ ಶ್ಲೋಕಗಳಲ್ಲಿ ಈ ರೀತಿ ವಿಷದೀಕರಿಸಿದ್ದಾರೆ: “ಯಾರು ಶ್ರೋತ್ರಿಯನೊ, ಪಾಪ ರಹಿತನೊ, ಕಾಮವಿಲ್ಲದವನೊ, ಬ್ರಹ್ಮವಿದರಲ್ಲಿ ಶ್ರೇಷ್ಠನೊ, ಕಟ್ಟಿಗೆಯನ್ನೆಲ್ಲ ಸುಟ್ಟಿರುವ ಬೆಂಕಿಯಂತೆ ಶಾಂತನೊ, ಯಾವ ಪ್ರತಿಫಲವನ್ನೂ ಬಯಸದೆ ದಯಾಸಿಂಧುವಾಗಿರುವನೊ, ನಮಿಸಿದ ಸಾಧುಗಳಿಗೆ ಬಂಧುವೊ, ಇತರರ ಶ್ರಮವನ್ನು ಪರಿಹರಿಸುವುದರಲ್ಲಿ ತಾನಾಗಿಯೇ ಪ್ರವರ್ತಿಸುವನೊ, ವಸಂತ ಋತುವಿನಂತೆ ಲೋಕ ಕಲ್ಯಾಣನಿರತನೊ ಅವನೇ ಮಹಾಪುರುಷ.”

ಇಂತಹ ಮಹಾಪುರುಷರ ಸಂಗಮ “ದುರ್ಲಭ, ಅಮೋಘ, ಅಗಮ್ಯ” ಎಂದು ಉಪನಿಷತ್ತುಗಳು ಸಾರುತ್ತವೆ. ಈ ಮಹಾಪುರುಷರ ಸಾಲಿಗೆ ಸೇರಿದ ಅನೇಕ ಮಹಾನುಭಾವರಿದ್ದಾರೆ. ಅದರಲ್ಲಿ ಇಲ್ಲಿ ನಾವು ಚಿತ್ರಿಸುತ್ತಿರುವವರ ಚರಿತ್ರೆ, ಭಗವಾನ್ ಶ್ರೀರಾಮಕೃಷ್ಣರ ಪ್ರಿಯಶಿಷ್ಯರೂ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ನಾಲ್ಕನೆಯ ಸರ್ವಾಧ್ಯಕ್ಷರೂ ಆಗಿದ್ದ ಶ್ರೀಮತ್ ಸ್ವಾಮಿ ವಿಜ್ಞಾನಾನಂದಜಿ ಮಹಾರಾಜರದು. ಅವರ ಸಂಸರ್ಗಕ್ಕೆ ಬಂದವರ ಜೀವನ ನೋಡಿದರೆ ಅವರ ಮಹಿಮೆ ಏನು ಎಂದು ಅರಿವಾಗುತ್ತದೆ. ವೇಣಿ ಎಂಬ ಓರ್ವ ದರಿದ್ರ, ನಿರಕ್ಷರ, ಅನಾಥ ಬಾಲಕನನ್ನು ತಮ್ಮ ಸೇವೆಗಾಗಿ ನಿಯೋಜಿಸಿ ಕೊಂಡು ಆತನಲ್ಲಿ ಎಂತಹ ಅದ್ಭುತ ಪರಿವರ್ತನೆ ಉಂಟು ಮಾಡಿದರೆಂಬುದನ್ನು ನೋಡೋಣ.



ಸ್ವಾಮಿ ವಿಜ್ಞಾನಾನಂದಜಿ ಮಹಾರಾಜ್ ವೇಣಿಯೊಡನೆ

ಒಮ್ಮೆ ಸ್ವಾಮಿ ಅಜಯಾನಂದರಿಗೆ ಬೇಲೂರು ಮಠದಿಂದ ಅಲಹಾಬಾದಿಗೆ ಒಂದು ಪತ್ರವನ್ನು ಬರೆಯಲು ಹೇಳಿ, ಯಾರಿಗೆ ಪತ್ರಬರೆಯಬೇಕಾಗಿತ್ತೊ ಅವರ ಹೆಸರನ್ನು ಈ ರೀತಿ ಹೇಳುತ್ತಾರೆ ವಿಜ್ಞಾನಾನಂದಜಿ ಮಹಾರಾಜ್: “ಬರೆ, ವೇಣಿಮಾಧವ, M.A. B.L. LLB. ಅಲಹಾಬಾದ್”. ಅತ್ಯಂತ ಕುತೂಹಲದಿಂದ ಸ್ವಾಮಿ ಅಜಯಾನಂದರು ಪ್ರಶ್ನಿಸುತ್ತಾರೆ: “ಮಹಾರಾಜ್, ಯಾರೀತ?” ಎಂದು. ಅದಕ್ಕೆ ಉತ್ತರವಾಗಿ ವಿಜ್ಞಾನಾನಂದಜಿ ಗಂಭೀರವಾಗಿ ನಗಲಾರಂಭಿಸುತ್ತಾರೆ. ಅವರ ಪಕ್ಕದಲ್ಲಿದ್ದ ಇನ್ನೋರ್ವ ಸಾಧುಗಳು ಹೇಳುತ್ತಾರೆ: “ಆತ ಮಹಾರಾಜರ ಹಳೆಯ ಸೇವಕ” ಎಂದು.

ವೇಣಿ ಉತ್ತರಪ್ರದೇಶಕ್ಕೆ ಸೇರಿದವ. ಬಹು ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಸುಮಾರು ೧೦ ಅಥವಾ ೧೧ ವರ್ಷದ ಬಾಲಕನಾಗಿದ್ದಾಗ ಮುಠಿಗಂಜ್ ಮೊಹಲ್ಲಾದಲ್ಲಿನ ದುಷ್ಟಬಾಲಕರ ಗುಂಪಿನಲ್ಲಿ ಸೇರಿಕೊಂಡು ಅರ್ಥವಿಲ್ಲದ ಹರಟೆಯಲ್ಲಿ ಕಾಲ ಕಳೆಯುತ್ತಿದ್ದ. ಆ ದುಷ್ಟ ಬಾಲಕರ ಗುಂಪು ಮುಠಿಗಂಜ್ ಆಶ್ರಮದ ಬಳಿ ಬಂದು ಸ್ವಾಮಿ ವಿಜ್ಞಾನಾ

ನಂವರಿಗೆ ಕೇಳುವಂತೆ "ಮುಠಿಗಂಜಿನ ಬಾಬಾ ಸತ್ತರೆ ನಾವೆಲ್ಲ ಬೆಣ್ಣೆ ರೊಟ್ಟಿ ತಿನ್ನೋಣ" ಎನ್ನುತ್ತ ಹರಟುತ್ತಿದ್ದರು. ಅವರನ್ನು ಸ್ವಾಮಿಗಳು ಎಷ್ಟು ಗದರಿಸಿದರೂ ಅವರು ದುಷ್ಟತನ ಬಿಡು ತ್ತಿರಲಿಲ್ಲ. ಒಮ್ಮೆ ವಿಜ್ಞಾನಾನಂದಜೀ ಆ ಗುಂಪಿನಲ್ಲಿದ್ದ ವೇಣಿ ಯನ್ನು ಪ್ರತ್ಯೇಕವಾಗಿ ಕರೆದು ಚೆನ್ನಾಗಿ ಛೀಮಾರಿ ಹಾಕುತ್ತಾರೆ. ಇದಾದ ಸ್ವಲ್ಪ ದಿನಕ್ಕೆ ವೇಣಿಯ ಚಿಕ್ಕಪ್ಪ ಅವನನ್ನು ಕರೆದು "ನೋಡು, ಇನ್ನುಮೇಲೆ ನೀನು ಆ ಆಶ್ರಮದಲ್ಲಿ ಕೆಲಸ ಮಾಡ ಬೇಕು, ವಿಜ್ಞಾನಾನಂದಜೀಯವರ ಸೇವಕನಾಗಿ" ಎನ್ನುತ್ತಾನೆ. ಅದನ್ನು ಕೇಳಿ ಹೆದರಿದ ವೇಣಿ "ಇಲ್ಲ, ಇಲ್ಲ, ನಾನಲ್ಲಿ ಹೋದರೆ ಬಾಬಾ ನನ್ನನ್ನು ಹೊಡೆದು ಸಾಯಿಸುತ್ತಾರೆ" ಎನ್ನು ತ್ತಾನೆ. ವೇಣಿಯ ಹೆದರಿಕೆಗೆ ಕಾರಣ ತಿಳಿದಿದ್ದ ಆತನ ಚಿಕ್ಕಪ್ಪ "ಇಲ್ಲ, ಇಲ್ಲ, ಬಾಬಾ ನಿನ್ನನ್ನು ಪ್ರೀತಿಯಿಂದ ನೋಡುತ್ತಾರೆ. ಅವರಿಗೆ ನೀನೇ ಬೇಕಂತೆ" ಎನ್ನುತ್ತಾರೆ. ಈ ರೀತಿಯಲ್ಲಿ ವಿಜ್ಞಾನಾನಂದಜೀ ತಮ್ಮ ಸೇವಕನನ್ನು ತಮ್ಮೆಡೆಗೆ ಆಕರ್ಷಿಸಿ ಕೊಂಡರು. ವೇಣಿಯ ಚಿಕ್ಕಪ್ಪ ಹೇಳಿದ್ದು ಸತ್ಯ. ವಿಜ್ಞಾನಾನಂದಜಿ ವೇಣಿಯನ್ನು ಅತ್ಯಂತ ಪ್ರೀತಿಯಿಂದ ಕಂಡರು. ಅವನ ಹಿಂದಿನ ಅಪರಾಧಗಳನ್ನೆಲ್ಲ ಮರೆತೇ ಬಿಟ್ಟರು. ದಿನದಿನಕ್ಕೂ ವೇಣಿ ಸ್ವಾಮಿಗಳಿಗೆ ಅತ್ಯಂತ ಪ್ರಿಯನಾದ, ಬಹು ನಿಷ್ಠೆಯಿಂದ ಅವರ ಸೇವೆಯನ್ನು ಮಾಡಲಾರಂಭಿಸಿದ.

ವಿಜ್ಞಾನಾನಂದಜಿ ವೇಣಿಯನ್ನು ಎಂದೂ ಸೇವಕನಾಗಿ ಕಾಣಲೇ ಇಲ್ಲ. ಆತನನ್ನು ತಮ್ಮ ಸ್ವಂತ ಪುತ್ರನಂತೆ ಕಾಣು ತ್ತಿದ್ದರು. ಹಾಗೂ ಬಹು ಪ್ರೀತಿಯಿಂದ ಸ್ನೇಹದಿಂದ ಆತನನ್ನು ಸಲಹುತ್ತಿದ್ದರು. ವೇಣಿಯಿಲ್ಲದಿದ್ದರೆ ಅವರ ಯಾವ ಕೆಲಸವೂ ಪೂರ್ಣವಾಗುತ್ತಿರಲಿಲ್ಲ. ಕೆಲವೊಮ್ಮೆ ಆತನನ್ನು ಬಯ್ಯುತ್ತಿದ್ದರು, ಮತ್ತೊಮ್ಮೆ ಪ್ರೀತಿಯಿಂದ "ವೇಣೀ ಬಾಬಾ" ಎನ್ನುತ್ತಿದ್ದರು. ವೇಣಿ ಪ್ರತಿದಿನ ಬೆಳಗ್ಗೆ ಸಂಜೆ ಮಹಾರಾಜರಿಗೆ ಚಹ ಮಾಡಿಕೊಡು ತ್ತಿದ್ದ. ಒಳ್ಳೆಯ ರುಚಿರುಚಿಯಾದ ಅಡುಗೆಮಾಡಿ ಬಡಿಸುತ್ತಿದ್ದ. ಭಕ್ತಾದಿಗಳಿಗೆ ಸ್ವಾಮಿಗಳು ಏನಾದರೂ ಸಮಾಚಾರ ತಿಳಿಸ ಬೇಕಾಗಿದ್ದರೆ ತಾನೇ ಹೋಗಿ ತಿಳಿಸುತ್ತಿದ್ದ. ಆಶ್ರಮದ ಎಷ್ಟೋ ಕೆಲಸಗಳೊಂದಿಗೆ ಸ್ವಾಮಿಗಳ ವೈಯಕ್ತಿಕ ಸೇವೆಯನ್ನೂ ಮಾಡು ತ್ತಿದ್ದ. ವಿಜ್ಞಾನಾನಂದಜಿ ಸಾಧುಗಳ ಕೈಯಲ್ಲಿ ಯಾವ ಸೇವೆ ಯನ್ನೂ ಸ್ವೀಕರಿಸುತ್ತಿರಲಿಲ್ಲ. ಆದರೆ ಭಾಗ್ಯವಂತ ವೇಣಿ ಈ ಅಧಿಕಾರ ಪಡೆದಿದ್ದ. ಒಮ್ಮೆ ಅವರು ಬೇಲೂರು ಮಠದಲ್ಲಿದ್ದಾಗ ಖಾಯಿಲೆ ಬಿದ್ದರು. ಯಾರ ಸೇವೆಯನ್ನೂ ಸ್ವೀಕರಿಸುತ್ತಿರಲಿಲ್ಲ. ಕಡೆಗೆ ಅವರ ನಿರ್ದೇಶದಂತೆ ಅಲಹಾಬಾದಿಗೆ ಸಮಾಚಾರವಿತ್ತು ವೇಣಿಯನ್ನು ಕರೆಸಿದರು. ವೇಣಿ ಬಂದು ಅವರ ಸೇವೆಗೆ ನಿಲ್ಲಲು ಸ್ವಾಮಿಗಳು ಶಾಂತರಾದರು.

ಮೊದಮೊದಲು ಆಶ್ರಮ ಆರ್ಥಿಕವಾಗಿ ಕಷ್ಟಪಡುತ್ತಿದ್ದ ಕಾಲದಲ್ಲಿ ವೇಣಿ ಊಟದ ಡಬ್ಬಿಯನ್ನು ತೆಗೆದುಕೊಂಡು ಹೋಗಿ ಮುಠಿಗಂಜ್ ಮೊಹಲ್ಲಾದಲ್ಲಿನ ಭಕ್ತರ ಮನೆಯಿಂದ ಸ್ವಾಮಿ ಗಳಿಗಾಗಿ ಊಟ ತರುತ್ತಿದ್ದ. ಭಕ್ತಾದಿಗಳು ವಿಜ್ಞಾನಾನಂದಜೀ ತಮ್ಮ ಬಳಿಗೆ ಬಂದಾಗ ಅನೇಕ ತರದ ತರಕಾರಿ ಮುಂತಾದವು ಗಳನ್ನು ಕೊಡುತ್ತಿದ್ದರು. ಅದನ್ನೆಲ್ಲ ತಂದು ವಿಜ್ಞಾನಾನಂದಜಿ ವೇಣಿಯನ್ನು ಕರೆದು "ವೇಣೀ, ನೋಡಿಲ್ಲಿ, ಇದರಲ್ಲಿ ವಿಧವಿಧ ವಾದ ತರಕಾರಿ ಇದೆ. ಅಡುಗೆ ಮಾಡುವೆಯಾ?" ಎನ್ನುತ್ತಿದ್ದರು. ಯಾರಾದರೂ ಭಕ್ತರು ಅವರ ಭಾವಚಿತ್ರವನ್ನು ತೆಗೆಯಬಯಸಿ ದರೆ "ವೇಣಿಯ ಚಿತ್ರ ತೆಗೆಯಿರಿ" ಎನ್ನುತ್ತಿದ್ದರು. ಒಂದು ಕಾಲ ದಲ್ಲಿ ಮುಠಿಗಂಜ್ ಆಶ್ರಮವೆಲ್ಲ ವೇಣಿಯ ವಿವಿಧ ಭಂಗಿಯ ಚಿತ್ರಗಳಿಂದ ತುಂಬಿತ್ತು. ಭಕ್ತಾದಿಗಳು ತಮ್ಮ ಶ್ರೀ ಗುರುವಿನ ವಿವಿಧ ಚಿತ್ರಗಳನ್ನು ಇಟ್ಟುಕೊಂಡರೆ ಆಶ್ಚರ್ಯವಿಲ್ಲ. ಆದರೆ ಶ್ರೀಗುರುವೇ ಶಿಷ್ಯನ ಅನೇಕ ಚಿತ್ರಗಳನ್ನು ಇಟ್ಟುಕೊಂಡಿರುವುದು ಒಂದು ವಿಶೇಷ ಹಾಗೂ ಅಪರೂಪ! ಶ್ರೀಗುರುವಿನ ಕೃಪೆ ಅಮೋಘ, ದುರ್ಲಭ ನಿಜಕ್ಕೂ!

ವಿಜ್ಞಾನಾನಂದಜೀ ಮಹಾರಾಜರು ವೇಣಿಯ ಮುಂದೆ ಅತ್ಯಂತ ಉಚ್ಚ ಆಧ್ಯಾತ್ಮಿಕ ಹಾಗೂ ಸಂನ್ಯಾಸದ ಆದರ್ಶವನ್ನು ಇಟ್ಟಿದ್ದರು. ಆಗಾಗ ಅವರು ವೇಣಿಗೆ ಹೇಳುತ್ತಿದ್ದರು "ವೇಣಿ, ನೀನು ಮದುವೆಯಾಗಬೇಡ" ಎಂದು. ವೇಣಿಯೂ ಅವರ ಮಾತಿಗೆ ಸಮ್ಮತಿಸಿದ. ಆದರೆ ಆತನ ಬಂಧುಗಳು ಇದನ್ನೊಪ್ಪುವರೇ? ಒಮ್ಮೆ ಆತನ ಬಂಧುಗಳೆಲ್ಲ ಸೇರಿ ಆತನ ಮದುವೆಗೆ ಏರ್ಪಾಡು ಮಾಡಿ ಆತನನ್ನು ಆಶ್ರಮದಿಂದ ಮನೆಗೆ ಕರೆದೊಯ್ಯಲು ಬಂದರು. ಅಸಹಾಯಕನಾದ ವೇಣಿಗೆ ಏನು ಮಾಡುವುದೂ ತೋಚಲಿಲ್ಲ. ವಿಜ್ಞಾನಾನಂದಜಿ ಇದಕ್ಕೆ ಎಳ್ಳಷ್ಟೂ ಒಪ್ಪುವುದಿಲ್ಲ ಎಂದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾದರೆ ಅವರ ಸಮಕ್ಷಮದಲ್ಲಿ ಮಠವನ್ನು ಬಿಟ್ಟು ಹೊರಗೆ ಹೋಗುವುದು ಹೇಗೆ? ಕಡೆಗೆ ಆತ ಒಂದು ನಿರ್ಧಾರಕ್ಕೆ ಬಂದ, ರಾತ್ರಿಯ ವೇಳೆ ವಿಜ್ಞಾನಾನಂದಜಿ ಮಲಗಿ ನಿದ್ರಿಸುತ್ತಿರುವಾಗ ಮೆಲ್ಲನೆ ಮಠದಿಂದ ಹೊರಗೆ ಬಂದು ಬಿಡುವುದು ಎಂದು. ಅಂತೆಯೇ ಒಂದು ದಿನ ವೇಣಿ ಯಾರಿಗೂ ತಿಳಿಸದೆ ಮಠದಿಂದ ಹೊರಬರಲು ಮುಂದಿನ ಬಾಗಿಲ ಬಳಿಗೆ ಬರುತ್ತಾನೆ, ಆಶ್ಚರ್ಯ! ಅಲ್ಲಿ ವಿಜ್ಞಾನಾನಂದಜೀ ಕುರ್ಚಿಯ ಮೇಲೆ ಕುಳಿತಿದ್ದಾರೆ! ಆ ರಾತ್ರಿಯ ವೇಳೆಯಲ್ಲಿ ಅಲ್ಲಿ ಅವರು ಕೂಡುವ ಸಂಭವವೇ ಇಲ್ಲ. ಇನ್ನೇನು ಮಾಡುವುದು? ಹಿಂದಿನ ಬಾಗಿಲಿನಿಂದ ಹೊರಗೆ ಬರೋಣ ಎಂದುಕೊಂಡು ವೇಣಿ ಹಿಂದಿನ ಬಾಗಿಲಿಗೆ ಬರುತ್ತಾನೆ. ಅಲ್ಲಿಯೂ ಸ್ವಾಮಿಗಳು ಕುರ್ಚಿಯಲ್ಲಿ ಕುಳಿತಿದ್ದಾರೆ. ಕಡೆಗೆ ಮೂರನೆಯ ಒಂದು ಹಾದಿಯಿಂದ ಹೊರ ಬರಲು ವೇಣಿ ಅಲ್ಲಿಗೆ ಬಂದ. ಮತ್ತೆ ಅದೇ ದೃಶ್ಯ. ಪುನಃ ಪುನಃ ಈ ರೀತಿಯ ದರ್ಶನ ಪಡೆದು ವೇಣಿ ಸದ್ದಿಲ್ಲದೆ ತನ್ನ ಕೋಣೆಗೆ ಬಂದು ಮಲಗಿಬಿಟ್ಟ. ಆ ಕ್ಷಣದಲ್ಲಿಯೇ ಆತನ ವೈವಾಹಿಕ ಜೀವನದ ಆಸೆಯೂ ಚಿರನಿದ್ರೆಗೆ ಹೊರಟುಹೋಯಿತು.

ಮರುದಿನ ಎಂದಿನಂತೆ ವೇಣಿ ಸ್ವಾಮೀಜಿ ಅವರಿಗೆ ಚಹ ಮಾಡಿ ತಂದುಕೊಟ್ಟಾಗ ಅವರು ಆತನನ್ನೇ ನೋಡುತ್ತ ಮುಸು ಮುಸು ನಗತೊಡಗಿದರು. ಸ್ವಲ್ಪ ಸಮಯದ ಬಳಿಕ ಆತ ನನ್ನುದ್ದೇಶಿಸಿ ಕೇಳಿದರು: "ವೇಣಿ, ಮದುವೆಯಾಗುವೆಯಾ?"

ಎಂದು. "ಇಲ್ಲ ಬಾಬಾ, ಎಂದೆಂದಿಗೂ ಇಲ್ಲ" ಎಂದು ದೃಢವಾದ ಧ್ವನಿಯಲ್ಲಿ ಉತ್ತರಿಸಿದ. ಅಂತೆಯೇ ಇಡೀ ಜೀವನ ನಡೆದುಕೊಂಡನು. ಸ್ವಾಮೀಜಿಯವರ ಅನುಗ್ರಹವೊಂದನ್ನು ಬಿಟ್ಟು ವೇಣಿ ಬೇರೇನೂ ಬಯಸಲಿಲ್ಲ. ಇತರರಿಗೆ ಮಂತ್ರದೀಕ್ಷೆಯನ್ನು ಸ್ವಾಮಿಗಳು ನೀಡುವುದನ್ನು ಕಂಡು ವೇಣಿ ತನಗೂ ಮಂತ್ರದೀಕ್ಷೆ ನೀಡಬೇಕೆಂದು ಕೇಳಿಕೊಂಡನು. ಅದಕ್ಕೆ ವಿಜ್ಞಾನಾನಂದಜಿ "ನನ್ನ ಸೇವೆ ಮಾಡುತ್ತಿರುವೆಯಲ್ಲ, ಅದರಿಂದಲೇ ನಿನಗೆಲ್ಲವೂ ಸಿದ್ಧಿಸುತ್ತದೆ" ಎಂದರು. ಕಡೆಗೆ ಒಂದು ದಿನ ಮಂತ್ರದೀಕ್ಷೆಯನ್ನೂ ನೀಡಿ ಆತನನ್ನು ಧನ್ಯಗೊಳಿಸಿದರು. ಭಕ್ತಾದಿಗಳು ವಿಜ್ಞಾನಾನಂದಜಿ ಅವರಿಗೆ ಪ್ರಣಾಮ ಸಲ್ಲಿಸಿ ಕೆಲವೊಮ್ಮೆ ವೇಣಿಗೂ ನಮಸ್ಕಾರ ಮಾಡಲು ಬರುತ್ತಿದ್ದರು. ಆದರೆ ವೇಣಿ ಇದಕ್ಕೆ ಅವಕಾಶವೀಯುತ್ತಿರಲಿಲ್ಲ. ಒಮ್ಮೆ ಆತ ಮಹಾರಾಜರನ್ನು ಕೇಳುತ್ತಾನೆ: "ಬಾಬಾ, ಅವರೆಲ್ಲ ಗಣ್ಯರು, ಮಾನ್ಯರು, ನಿಮಗೆ ವಂದಿಸಿದ ಬಳಿಕ ನನಗೇಕೆ ವಂದನೆ ಮಾಡಲು ಬರುತ್ತಾರೆ?"ಎಂದು. ಅದಕ್ಕೆ ಮಹಾರಾಜರು "ನೋಡು, ವೇಣಿ. ಈ ಶರೀರ ಶ್ರೀರಾಮಕೃಷ್ಣರನ್ನು ಸ್ಪರ್ಶಿಸಿ ಧನ್ಯವಾಗಿದೆ. ಅದಕ್ಕೆ ನೀನು ಸೇವೆ ಸಲ್ಲಿಸುತ್ತಿರುವೆಯಲ್ಲ, ಅದಕ್ಕಾಗಿ ನಿನಗೆ ವಂದನೆ ಮಾಡಲು ಅವರು ಬರುವರು" ಎಂದರು.

ವೇಣಿ ವಿಜ್ಞಾನಾನಂದರಿಗೆ ಸೇವೆ ಸಲ್ಲಿಸುವ ವಿಚಾರದಲ್ಲಿ ಒಂದು ರೀತಿಯ ಹೆಮ್ಮೆಯನ್ನು ಹೊಂದಿದ್ದ. ಆತ ಸ್ವಾಮಿಗಳ ಪ್ರೀತಿಗಾಗಿ ತನ್ನನ್ನು ಪೂರ್ಣವಾಗಿ ಮಾರಿಕೊಂಡಿದ್ದ. ಸ್ವಾಮಿಗಳೂ ಸಹ ವೇಣಿಯನ್ನು ಪೂರ್ಣವಾಗಿ ನಂಬಿದ್ದರು. ಕೆಲವೊಮ್ಮೆ ಆತನ ಹೆಸರನ್ನು ಹಿಡಿದು ಕರೆದು ಆತನೊಡನೆ ವಿನೋದದಲ್ಲಿ ತೊಡಗುತ್ತಿದ್ದರು. ಒಂದು ದಿನ, "ವೇಣಿ, ಹೇಳು ಈಗ ಬೆಳಗಾ ರಾತ್ರಿಯಾ?" ಎಂದರು. ವೇಣಿ ಸುಮ್ಮನಿದ್ದ. ಇನ್ನೊಮ್ಮೆ ಸ್ವಾಮಿಗಳು "ವೇಣಿ, ನೀನು ಬಹುವಾಗಿ ನಿದ್ದೆ ಮಾಡುವೆ" ಎನ್ನಲು ವೇಣಿ ತುಸು ಕೋಪಗೊಂಡವನಂತೆ "ಬಾಬಾ, ನೀವು ತುಂಬ ಮಾತನಾಡುವಿರಿ" ಎಂದ. ಆಗ ಸ್ವಾಮಿಗಳು ಅಲ್ಲಿದ್ದವರಿಗೆ ನಗುತ್ತ, "ಕೇಳಿದಿರಾ ಆತ ಏನು ಹೇಳಿದ" ಎಂದರು. ಇದು ವೇಣಿಯ ರೀತಿ. ಆತನಿಗೆ ಸ್ವಾಮಿಗಳೊಡನೆ ಬಹಳ ಸಲಿಗೆ ಇತ್ತು. ಆದ್ದರಿಂದ ಆತನಿಗೆ ಸ್ವಾಮಿಗಳೊಡನೆ ಔಪಚಾರಿಕವಾಗಿ ವ್ಯವಹರಿಸುವ ಅಗತ್ಯವಿರಲಿಲ್ಲ. ನಿರಕ್ಷರಕುಕ್ಷಿಯಾಗಿದ್ದ ಸರಳ ಮುಕ್ತ ಮನಸ್ಸಿನ ವೇಣಿ ತನ್ನ ಮನಸ್ಸಿಗೆ ಬಂದದ್ದನ್ನೆಲ್ಲ ಆಡಿಬಿಡುತ್ತಿದ್ದ. ಆದರೆ ಆತ ಸಂಪೂರ್ಣನಾಗಿ ಶುದ್ಧನಾಗಿದ್ದ. ಆತನಲ್ಲಿ ಇದ್ದದ್ದು ಪರಿಶುದ್ಧವಾದ ಪ್ರೀತಿ ಮಾತ್ರ. ಇಲ್ಲದಿದ್ದಲ್ಲಿ ಸ್ವಾಮಿ ವಿಜ್ಞಾನಾನಂದರಂತಹ ಮಹಾಪುರುಷರ ಆಶ್ರಯ ಆತನಿಗೆ ದೊರೆಯುತ್ತಿತ್ತೇ? ಆತನ ಶುದ್ಧತೆಗಾಗಿಯೇ ಸ್ವಾಮಿಗಳು ಆತನನ್ನು ಆಳವಾಗಿ ಪ್ರೀತಿಸುತ್ತಿದ್ದರು. ನಿಜವಾಗಿಯೂ ಅವರ ಕೃಪೆ ಆತನಲ್ಲಿ ಕೆಲಸ ಮಾಡಿತ್ತು. ಆತ ಸ್ವಾಮಿಗಳ ಪ್ರತಿಯೊಂದು ಮಾತನ್ನೂ ಸರಿಯಾಗಿ ಅರ್ಥಮಾಡಿಕೊಳ್ಳುತ್ತಿದ್ದ.

ಸ್ವಾಮಿ ವಿಜ್ಞಾನಾನಂದಜಿ ತಮ್ಮ ಕೊನೆಯ ದಿನಗಳಲ್ಲಿ ಕಾಯಿಲೆಯಿಂದ ನರಳುತ್ತಿದ್ದಾಗ ವೇಣಿ ಬಹು ದುಃಖಿತನಾಗಿ ಕಣ್ಣೀರು ಸುರಿಸುತ್ತಿದ್ದ. ಬಹುಶಃ ಸ್ವಾಮಿಗಳು ಆತನಿಗೆ ಅವರ ಅಂತಿಮ ಕಾಲದ ಮುನ್ಸೂಚನೆ ಕೊಟ್ಟಿದ್ದರೇನೊ! ವೇಣಿಗೆ ಚೆನ್ನಾಗಿ ತಿಳಿದಿತ್ತು ಸ್ವಾಮಿ ವಿಜ್ಞಾನಾನಂದರ ಮಾತು ಎಂದೂ ಸುಳ್ಳಾಗುವುದಿಲ್ಲ ಎಂದು. ಆದ್ದರಿಂದಲೇ ಆತ ಎಲ್ಲರಿಗೂ ಹೇಳುತ್ತಿದ್ದ "ಇನ್ನು ಬಾಬಾ ಹೆಚ್ಚು ಕಾಲ ಜೀವಿಸಿರುವುದಿಲ್ಲ" ಎಂದು. ತಮ್ಮ ಮಹಾಸಮಾಧಿಗೆ ಮೊದಲು ವಿಜ್ಞಾನಾನಂದಜಿ ವೇಣಿಯನ್ನು ಕರೆದು ಏನಾದರೂ ಕೇಳಿ ತೆಗೆದುಕೊ ಎನ್ನುತ್ತಾರೆ. ಅದಕ್ಕೆ ವೇಣಿ ದುಃಖಿತನಾಗಿ, "ಬಾಬಾ, ನೀವು ನನ್ನನ್ನು ಬಿಟ್ಟುಹೋದ ಮೇಲೆ ನಾನು ಯಾರನ್ನು ಆಶ್ರಯಿಸಿ ಬಾಳಲಿ? ನನಗೆ ಏನೂ ಬೇಡ" ಎಂದು ಅಳುತ್ತಾನೆ. ಅದಕ್ಕೆ ವಿಜ್ಞಾನಾನಂದಜಿ, "ಸರಿಯಾಗಿ ಯೋಚಿಸಿ ಹೇಳು, ನಿನಗೆ ಹಣದ ಆವಶ್ಯಕತೆಯಿದ್ದರೆ ನಾನು ಅದನ್ನು ನಿನಗಾಗಿ ಇಟ್ಟು ಹೋಗುವೆ. ಆಗ ನಿನಗೆ ಯಾವ ತೊಂದರೆಯೂ ಬರಲಾರದು" ಎಂದರು. ತಕ್ಷಣ ವೇಣಿ ಉತ್ತರಿಸಿದ: "ಬಾಬಾ, ನಿಮ್ಮ ಕೃಪೆಯಿಂದ ನಾನು ಎಲ್ಲವನ್ನೂ ಪಡೆದಿದ್ದೇನೆ. ನನಗೆ ಬೇರೇನೂ ಬೇಡ, ಕೇವಲ ಶ್ರೀರಾಮಕೃಷ್ಣರ ಚರಣಕಮಲಗಳಲ್ಲಿ ಶುದ್ಧಭಕ್ತಿ ಉಂಟಾಗಲಿ" ಎಂದು ಕೈಜೋಡಿಸಿಕೊಂಡು ಪ್ರಾರ್ಥನೆ ಮಾಡಿದ. ಆಗ ವಿಜ್ಞಾನಾನಂದಜಿ ತಮ್ಮೆರಡು ಹಸ್ತಗಳನ್ನೂ ಆತನ ತಲೆಯ ಮೇಲಿರಿಸಿ "ವೇಣಿ, ಈ ಹಸ್ತಗಳೇನಾದರೂ ಶ್ರೀರಾಮಕೃಷ್ಣರ ಸೇವೆ ಮಾಡಿದ್ದರೆ ನಿನಗೆ ಪೂರ್ಣವಾದ ಶುದ್ಧ ಭಕ್ತಿ ಉಂಟಾಗಲಿ ಅವರ ಚರಣಗಳಲ್ಲಿ" ಎಂದು ಆಶೀರ್ವದಿಸಿದರು.

ವಿಜ್ಞಾನಾನಂದರ ಮಹಾಸಮಾಧಿಯ ಬಳಿಕ ವೇಣಿ ಹೊಸ ವ್ಯಕ್ತಿಯಾದ. ಆತ ತನ್ನೊಳಗೆ ತಾನೇ ಯಾವುದೊ ಲೋಕದಲ್ಲಿ ಮಗ್ನನಾಗಿರುತ್ತಿದ್ದ. ಆಶ್ರಮದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರೂ ಆತನ ಮನಸ್ಸು ಎಲ್ಲೋ ಇರುತ್ತಿತ್ತು. ಮನಸ್ಸಿದ್ದರೆ ಕೆಲಸ ಮಾಡುತ್ತಿದ್ದ, ಇಲ್ಲದಿದ್ದಲ್ಲಿ ಏಕಾಂತದಲ್ಲಿ ಒಬ್ಬನೇ ಕುಳಿತು ಆಗಸವನ್ನು ದಿಟ್ಟಿಸಿ ನೋಡುತ್ತಿದ್ದ. ಸ್ವಾಮಿಗಳು ಬಿಟ್ಟುಹೋದ ಹಣವನ್ನು ಆತ ಆಶ್ರಮಕ್ಕೆ ಕೊಟ್ಟುಬಿಟ್ಟ. ಸ್ವಾಮಿಗಳ ಮಹಾಸಮಾಧಿಯ ಬಳಿಕವೂ ಅವರ ದರ್ಶನ ತನಗೆ ಅನೇಕ ಬಾರಿ ಆಗಿದೆಯೆಂದು ವೇಣಿ ಹೇಳುತ್ತಿದ್ದ. ಅವರ ಮಹಾಸಮಾಧಿಯ ಕೆಲವೇ ದಿನಗಳಲ್ಲಿ ಅವರು ಆತನಿಗೆ ಕಾಣಿಸಿಕೊಂಡು "ವೇಣಿ, ಚಹ ಮಾಡಿ ತಾ" ಎನ್ನುತ್ತಾರೆ. ಅತ್ಯಂತ ಭಕ್ತಿಯಿಂದ ಚಹ ಮಾಡಿ ವೇಣಿ ಅದನ್ನು ದೇವರ ಮನೆಯಲ್ಲಿ ತಂದಿಡುತ್ತಾನೆ. ಆತ ಹೇಳುತ್ತಿದ್ದ, "ಬಾಬಾ ಈ ಆಶ್ರಮ ಬಿಟ್ಟು ಹೋಗೇ ಇಲ್ಲ. ನಾನು ಅವರನ್ನು ನೆನೆಸಿದಾಗಲೆಲ್ಲ ಬಂದು ದರ್ಶನವೀಯುತ್ತಾರೆ" ಎಂದು. ಇನ್ನೊಮ್ಮೆ ತನ್ನದೇ ಆದ ಮುಗ್ಧ ಭಾವದಲ್ಲಿ ವೇಣಿ ಹೇಳುತ್ತಾನೆ : "ಒಂದು ದಿನ ನಾನು ಮಲಗಿ ನಿದ್ರಿಸುತ್ತಿದ್ದೆ. ತಕ್ಷಣ ಬಾಬಾರನ್ನು ನೋಡಿದೆ. ಅವರು ನನ್ನೆದುರಿಗೆ ನಿಂತಿದ್ದರು. ನಾನು ಅವರನ್ನು ಕೇಳಿದೆ 'ಬಾಬಾ, ನಾನು ಇನ್ನೂ ಎಷ್ಟು ದಿನ ಇಲ್ಲಿರಬೇಕು' ಎಂದು. ಅದಕ್ಕೆ ಅವರು ಯಾವ ಉತ್ತರವನ್ನೂ ಈಯಲಿಲ್ಲ." ಈ ಘಟನೆಗಳಿಂದ ನಮಗೆ ಅರಿವಾಗುವುದೇನೆಂದರೆ

ವಿಜ್ಞಾನಾನಂದಜಿ ಎಷ್ಟರಮಟ್ಟಿಗೆ ವೇಣಿಯನ್ನು ಪ್ರೀತಿಸುತ್ತಿದ್ದರು ಎಂದು.

ಒಮ್ಮೆ ಓರ್ವ ಭಕ್ತರು ವೇಣಿಗೆ ಹೇಳುತ್ತಾರೆ: "ವೇಣೀ, ನೀನು ಸ್ವಾಮಿಗಳ ಸೇವೆ ಎಷ್ಟೊಂದು ಮಾಡಿರುವೆ. ನೀನು ಅವರ ಅಪಾರ ಪ್ರೀತಿ ಹಾಗೂ ಕೃಪೆಗೆ ಪಾತ್ರನಾಗಿರುವೆ. ಇಂದಿಗೂ ನೀನವರ ದರ್ಶನ ಪಡೆಯುತ್ತಿರುವೆ. ವೇಣಿ, ನೀನು ನಿಜವಾಗಿಯೂ ಧನ್ಯ!" ಈ ಮಾತುಗಳನ್ನು ಕೇಳಿ ವೇಣಿ ಆ ಭಕ್ತರ ಮುಖವನ್ನು ನೋಡಿ ಕೇವಲ ನಗಲಾರಂಭಿಸಿದ—ಶುದ್ಧವಾದ ಸರಳವಾದ ನಗೆ! "ಅದರಿಂದೇನು? ಅದೊಂದು ದೊಡ್ಡ ವಿಷಯವಲ್ಲ" ಎಂಬ ಭಾವ ಆ ನಗೆಯ ಹಿಂದೆ ಕಂಡುಬರುತ್ತಿತ್ತು. ಒಳೊಳಗೇ ವೇಣಿ ಸಾಧನೆ ಮಾಡುತ್ತಿದ್ದ. ಆತನ ಮನಸ್ಸು ಸದಾ ಭಗವಂತನಲ್ಲಿ ಲೀನವಾಗಲು ಬಯಸುತ್ತಿತ್ತು.

ವೇಣಿಯಲ್ಲಿ ತೀವ್ರ ವೈರಾಗ್ಯ ಹಾಗೂ ಅನಾಸಕ್ತಭಾವ ತುಂಬ ಇತ್ತು. ಒಮ್ಮೆ ಆತ ಓರ್ವ ಭಕ್ತರಲ್ಲಿ ತನಗೆ ಒಂದು ಉಣ್ಣೆಯ ಸ್ವೆಟರಿನ ಆವಶ್ಯಕತೆಯಿದೆ ಎಂದು ಹೇಳಿದ. ಆ ಭಕ್ತರು ಸಂತೋಷದಿಂದ ಹೊಸದಾಗಿ ಉಣ್ಣೆ ತರಿಸಿ ಸ್ವೆಟರ್ ತಯಾರಿಸಿ ಆತನಿಗೆ ಕೊಟ್ಟರು. ಅದನ್ನು ಪಡೆದು ಆತ ತುಂಬ ಆನಂದ ಪಟ್ಟ. ಆದರೆ ಕೆಲವೇ ದಿನಗಳಲ್ಲಿ ಅದನ್ನು ಬೇರೊಬ್ಬರಿಗೆ ಕೊಟ್ಟುಬಿಟ್ಟ. ಅಷ್ಟೊಂದು ನಿರಾಸಕ್ತಿ ಪ್ರಾಪಂಚಿಕ ವಿಷಯವಸ್ತುಗಳಲ್ಲಿ.

೧೯೩೮ರಲ್ಲಿ ವಿಜ್ಞಾನಾನಂದಜಿ ಮಹಾಸಮಾಧಿ ಪಡೆಯುತ್ತಾರೆ. ಆಗ ವೇಣಿಯ ಸಂಬಂಧಿಕರು ಆಶ್ರಮಕ್ಕೆ ಬಂದು ಆತನನ್ನು ಮನೆಗೆ ಹಿಂತಿರುಗಿ ಮದುವೆಯಾಗಬೇಕೆಂದು ಪೀಡಿಸಲಾರಂಭಿಸಿದರು. ಅವರೆಲ್ಲ ನಂಬಿದ್ದರು, ಸ್ವಾಮಿಗಳು ವೇಣಿಗೆ ಬಹುವಾಗಿ ಹಣ ಇಟ್ಟಿರುತ್ತಾರೆ, ಇಷ್ಟೊಂದು ನಿಷ್ಠೆಯಿಂದ ಸೇವೆ ಮಾಡಿದ್ದಕ್ಕಾಗಿ ಆಶ್ರಮದಿಂದಲೂ ಹಣ ಕೇಳಿ ಪಡೆಯಬಹುದು ಎಂದು. ಆಗ ವೇಣಿಯ ವಯಸ್ಸು ೩೪ ಅಥವಾ ೩೫ ವರ್ಷ. ಆದರೆ ವೇಣಿ ಯಾರ ಮಾತಿಗೂ ಕಿವಿಗೊಡದೆ ದೃಢವಾದ ಧ್ವನಿಯಲ್ಲಿ ಹೇಳುತ್ತಾನೆ, "ಬಾಬಾ ನನ್ನನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ನಾನು ಇಲ್ಲೇ ಇರುವೆ. ಇಲ್ಲೇ ಸಾಯುವೆ" ಎಂದು.

ಇದಾದ ಎರಡು ವರ್ಷಗಳ ನಂತರ ವೇಣಿ ವಾಸಿಯಾಗದ ಖಾಯಿಲೆಗೆ ತುತ್ತಾದ. ಆಗಿನ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಶಂಕರಾನಂದಜಿ ಆತನನ್ನು ಕಾಶಿಯ ಸೇವಾಶ್ರಮಕ್ಕೆ ಕಳಿಸಬೇಕೆಂದು ಅಲಹಾಬಾದಿನ ಮುಠಿಗಂಜ್ ಆಶ್ರಮದ ಅಧ್ಯಕ್ಷರಿಗೆ ಪತ್ರ ಬರೆಯುತ್ತಾರೆ. ಆದರೆ ವೇಣಿ ಎಲ್ಲೂ ಹೋಗಲು ಒಪ್ಪದೆ, "ನಾನು ಬಹು ಚಿಕ್ಕವನಾಗಿದ್ದಾಗಲೇ ಈ ಮಠಕ್ಕೆ ಬಂದೆ. ಬಾಬಾರ ಪ್ರೀತಿಯಿಂದ ಯೋಗ್ಯ ವ್ಯಕ್ತಿಯಾದೆ. ಇಲ್ಲಿಂದ ನನ್ನನ್ನು ಬೇರೆಲ್ಲಿಗೂ ಕಳುಹಿಸಬೇಡಿ" ಎಂದು ಪ್ರಾರ್ಥನೆ ಮಾಡಿದ. ಪೂಜ್ಯ ಸ್ವಾಮಿ ಶಂಕರಾನಂದಜಿ ವೇಣಿಯನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಕಡೆಗೆ ಅವರೇ ಆತನನ್ನು ಕಾಶಿಗೆ ಕರೆದೊಯ್ಯಲು ಅಲಹಾ ಬಾದಿಗೆ ಬಂದರು. ಯಾವ ದಿನ ಶಂಕರಾನಂದಜಿ ಅಲಹಾಬಾದಿಗೆ ಬಂದರೊ ಅದೇ ದಿನ ವೇಣಿ ಪೂರ್ಣಜ್ಞಾನದೊಂದಿಗೆ ದೇಹತ್ಯಾಗ ಮಾಡಿದ. ವೇಣಿಯ ಅಂತಿಮಕಾಲದಲ್ಲಿ ಆತನ ಪಕ್ಕದಲ್ಲಿದ್ದ ಶಂಕರಾನಂದಜಿ ಆತನ ಕಿವಿಯಲ್ಲಿ ತಾರಕ ನಾಮವನ್ನು ಉಚ್ಚರಿಸಿದರು. ಈ ರೀತಿಯಲ್ಲಿ ಓರ್ವ ಅನಾಘ್ರಾತ, ವನಕುಸುಮ, ಓರ್ವ ಮಹಾಪುರುಷರ ಸಂಶ್ರಯಕ್ಕೆ ಬಂದು ಭಗವಂತನ ಅಡಿದಾವರೆಗಳನ್ನು ಸೇರಿತು.

### ನಾಶವಾಗದ ಸತ್ಕರ್ಮ

ಇಬ್ಬರು ಸ್ನೇಹಿತರು ಮರಳುಗಾಡಿನಲ್ಲಿ ಹೋಗುತ್ತಿರುವಾಗ ಅವರವರಲ್ಲಿ ಯಾವುದೊ ಒಂದು ವಿಷಯದಲ್ಲಿ ವಾದ ಪ್ರಾರಂಭವಾಯಿತು. ಒಬ್ಬನು ಕೋಪದಿಂದ ಇನ್ನೊಬ್ಬನ ಕೆನ್ನೆಯ ಮೇಲೆ ಹೊಡೆದನು. ಹೊಡೆಸಿಕೊಂಡವನು ಏನೂ ಪ್ರತಿಕ್ರಿಯೆ ತೋರಿಸದೆ ಮರಳಿನ ಮೇಲೆ ಹೀಗೆ ಬರೆದನು: "ಇಂದು ನನ್ನ ನಿಕಟ ಸ್ನೇಹಿತನು ಕೆನ್ನೆಗೆ ಹೊಡೆದನು."

ಅವರು ಪ್ರಯಾಣವನ್ನು ಮುಂದುವರಿಸಿದರು. ಅಲ್ಲಿ ಒಂದು ಸಿಹಿನೀರಿನ ಕೊಳ ಸಿಕ್ಕಿತು. ಅವರು ಅದರಲ್ಲಿ ಸ್ನಾನ ಮಾಡಬೇಕೆಂದು ಹೋದರು. ಕೆನ್ನೆಗೆ ಹೊಡೆಸಿಕೊಂಡವನ ಕಾಲು ಕೆಸರಿನಲ್ಲಿ ಹೂತುಕೊಂಡಿತು. ಅವನ ಸ್ನೇಹಿತನು ಅವನಿಗೆ ಮೇಲೆ ಬರಲು ಸಹಾಯ ಮಾಡಿದನು. ಕೆಸರಿನಿಂದ ಮೇಲೆ ಬಂದಮೇಲೆ ಒಂದು ಕಲ್ಲಿನ ಮೇಲೆ, "ಇಂದು ನನ್ನ ನಿಕಟ ಸ್ನೇಹಿತನು ನನ್ನ ಪ್ರಾಣರಕ್ಷಣೆ ಮಾಡಿದನು," ಎಂದು ಬರೆದನು.

"ನಾನು ಹೊಡೆದಾಗ ಅದನ್ನು ಮರಳಿನ ಮೇಲೆ ಬರೆದೆ. ಈಗ ಇದನ್ನು ನೀನು ಕಲ್ಲಿನ ಮೇಲೆ ಬರೆಯುತ್ತಿರುವೆ. ಇದಕ್ಕೆ ಕಾರಣವೇನು?" ಸ್ನೇಹಿತನು ಕೇಳಿದನು. ಅದಕ್ಕೆ ಇನ್ನೊಬ್ಬನು ಉತ್ತರಿಸಿದನು : "ನಮ್ಮನ್ನು ಯಾರಾದರೂ ನೋಯಿಸಿದಾಗ ಅದನ್ನು ಮರಳಿನ ಮೇಲೆ ಬರೆಯಬೇಕು. ಆಗ ಕ್ಷಮಾಗಾಳಿಯು ಅದನ್ನು ಅಳಿಸಿಹಾಕುತ್ತದೆ. ಆದರೆ ನಮಗೆ ಯಾರಾದರೂ ಒಳ್ಳೆಯದನ್ನು ಮಾಡಿದರೆ ಅದನ್ನು ಕಲ್ಲಿನ ಮೇಲೆ ಕೆತ್ತಬೇಕು. ಅದನ್ನು ಯಾವ ಗಾಳಿಯೂ ಅಳಿಸಿಹಾಕಲಾರದು."